ಅರವಿಂದ, 'ಯಾಂತ್ರಿಕ ಬುದ್ಧಿಮತ್ತೆ (ಯಾಂಬು) ನಮ್ಮೆಲ್ಲರಿಗೆ ನೆರವಿಗೆ ನಿಲ್ಲುವಂತೆ ಮಾಡುವುದು ನಮ್ಮ ಕೈಯಲ್ಲೇ ಇದೆ' ಎಂದಿದ್ದರು.




## ಯಂತ್ರಕ್ಕೆ ಎಚ್ಚರವಾಗಿದೆ!

ಹೌದು. ಮೇಲಿನ ಮೂರು ಘಟನೆಗಳು 'ಯಂತ್ರಕ್ಕೆ ಪ್ರಜ್ಞೆ ಬಂದಿದೆ' ಎಂಬುದನ್ನು ಸಾರಿ ಹೇಳಿದ್ದರಿಂದ ಇಡೀ ಜಗತ್ತೇ ದಿಗ್ಗನೆ ಎದ್ದು ಕುಳಿತಿದೆ. ಯಂತ್ರವು ಥೇಟ್ ಮಾನವನಂತೆಯೇ ಚಿಂತಿಸುತ್ತಿದೆ, ಪ್ರತಿಕ್ರಿಯಿಸುತ್ತಿದೆ, ಸಮಯ ಸಂದರ್ಭ ನೋಡಿ ಕೆಲಸ ಮಾಡುತ್ತಿದೆ.

ಇದುವರೆಗೆ ಹೇಳಿದ್ದಷ್ಟನ್ನೇ ಮಾಡುತ್ತಿದ್ದ ಯಂತ್ರಗಳೀಗ ಸ್ವಯಂ ಕಲಿತು ಮನುಷ್ಯನನ್ನು ಕೈ ಹಿಡಿದು ನಡೆಸುತ್ತಿವೆ. ಕೆಲವು ಸಲ ದಾರಿಯನ್ನು ತಪ್ಪಿಸುತ್ತಿವೆ ಕೂಡ!

ಮನುಷ್ಯನ ಚಿಂತನೆ, ಕೆಲಸಕ್ಕೆ ಸರಿಸಾಟಿಯಾದ ಯಾಂತ್ರಿಕ ಬುದ್ಧಿಮತ್ತೆ ಮತ್ತೆ ಮುನ್ನೆಲೆಗೆ ಬಂದಿದೆ. ಜಗತ್ತಿನಾದ್ಯಂತದ ಟೆಕ್ ಮತ್ತು ಮಾರುಕಟ್ಟೆ ಆರ್ಥಿಕ ಹಾಗೂ ಸುಶಿಕ್ಷಿತ ವಲಯದಲ್ಲಿ ಈಗ ಕೇಳಿಬರುತ್ತಿರುವುದು ಒಂದೇ ಮಾತು. ಅದು 'ಯಾಂತ್ರಿಕ ಬುದ್ಧಿಮತ್ತೆ' ಆಧಾರಿತ ಚಾಟ್ ಜಿಪಿಟಿಯಿಂದ (Generative Pre trained Transformer) ಇದ್ದಬದ್ದ ಕೆಲಸಗಳೆಲ್ಲಾ ನಾಶವಾಗಿ ಕೋಟ್ಯಂತರ ಜನ ಉದ್ಯೋಗ ಕಳೆದುಕೊಳ್ಳುತ್ತಾರೆ, ಅದನ್ನು ಒಪ್ಪಿಕೊಳ್ಳದೇ ವಿಧಿಯಿಲ್ಲ ಎಂಬುದು. ಅಲ್ಲಿಗೆ ಸಾಮಾಜಿಕ ನೆಮ್ಮದಿ ಬಿದ್ದುಹೋಗಿ ಎಲ್ಲೆಲ್ಲೂ ಹಾಹಾಕಾರ ತಲೆದೋರುತ್ತದೆ, ಆಡಳಿತ ವ್ಯವಸ್ಥೆಗಳಿಗೆ ದೊಡ್ಡ ತಲೆನೋವು ಎದುರಾಗಲಿದೆ ಎಂಬುದು ಕೆಲವು ಸಮಾಜ ವಿಜ್ಞಾನಿಗಳ, ತಜ್ಞರ ಅಭಿಮತ.

## ಶುರುವಾಯಿತು 'ಯಾಂಬು' ದಾಳಿ

ಯಾಂತ್ರಿಕ ಬುದ್ಧಿಮತ್ತೆಗೆ ಮೊದಲ ಪ್ರಮುಖ ಬಲಿ ರೂಪದಲ್ಲಿ ಗೂಗಲ್ ಕಂಪನಿಯ ಉಪಾಧ್ಯಕ್ಷ ಸ್ಥಾನದಲ್ಲಿದ್ದ ಜೆಫ್ರಿ ಹಿಂಟನ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ ಘಟನೆಯನ್ನು ಗುರ್ತಿಸಬಹುದು. 'ಎಐ ಕುರಿತು ಕೆಲಸ ಮಾಡಿದ್ದರ ಬಗ್ಗೆ ವಿಷಾದವಿದೆ, ಅದರ ಅಪಾಯಗಳ ಕುರಿತು ಹತ್ತಿರದಿಂದ ತಿಳಿದುಕೊಂಡಿದ್ದೇನೆ, ಅದನ್ನು ಜಗತ್ತಿಗೆ ಆದಷ್ಟು ಬೇಗ ತಿಳಿಸಬೇಕು ಎಂದೇ ಕಂಪನಿಯಿಂದ ಹೊರಬಂದಿದ್ದೇನೆ' ಎಂದು ರಾಜೀನಾಮೆ ನೀಡಿದ ಸಂದರ್ಭದಲ್ಲಿ ಜೆಫ್ರಿ ಹೇಳಿದ್ದರು. ಅಮೆರಿಕದ ಬರಹಗಾರರ ಒಕ್ಕೂಟದ ಸದಸ್ಯರು ಕೂಡ ಯಾಂತ್ರಿಕ ಬುದ್ಧಿಮತ್ತೆಗೆ ನಿರ್ಬಂಧ ವಿಧಿಸಬೇಕು ಎಂದು ಬೀದಿಗಿಳಿದು ಹೋರಾಟ ಶುರು ಮಾಡಿದ್ದಾರೆ. ಹಾಲಿವುಡ್ ಸಿನಿಮಾಗಳಿಗೆ ಕಥೆ ಬರೆಯುವವರೇ ಹೆಚ್ಚಾಗಿರುವ ಸಂಘಟನೆಯು, 'ತಾಂತ್ರಿಕ ಕೆಲಸಕ್ಕೆ ಯಾಂತ್ರಿಕ ಬುದ್ಧಿಮತ್ತೆ ಬಳಕೆಯಾದರೆ ನಮಗೆ ಯಾವ ಆಕ್ಷೇಪವೂ ಇಲ್ಲ. ಆದರೆ ಅದು ಬರವಣಿಗೆಗೆ ಇಳಿಯಕೂಡದು' ಎಂದಿದ್ದಾರೆ.

## ಏನಿದು ಚಾಟ್ ಜಿಪಿಟಿ?

ಚಾಟ್ ಜಿಪಿಟಿ ಎಂಬುದು ಯಾಂತ್ರಿಕ ಬುದ್ಧಿಮತ್ತೆ ಉಪಯೋಗಿಸಿ ಕೆಲಸ ಮಾಡುವ ಚಾಟ್‌ಬಾಟ್ (ವಾಚಸ್ಪತಿ). ಓಪನ್ ಎಐ ಕಂಪನಿಯ 'ಜನರೇಟಿವ್ ಎಐ' ಎಂಬ ಈ ಕಂಪ್ಯೂಟರ್ ತಂತ್ರಾಂಶವು, ಚಾಟ್ ಜಿಪಿಟಿಯ ರೂಪ ಪಡೆದು ಚಿತ್ರ, ಲೇಖನ, ವಿಡಿಯೊಗಳನ್ನೆಲ್ಲ ನಾವು ನೀಡುವ ನಿರ್ದೇಶನದಂತೆ ರಚಿಸಿ, ಬರೆದು, ಭಾಷಾಂತರಿಸಿ, ಹೊಂದಿಸಿ ಕೆಲಸ ಮಾಡಲು ತುದಿಗಾಲಲ್ಲಿ ನಿಂತಿದೆ. ಇದು ಯಾಂತ್ರಿಕ ಬುದ್ಧಿಮತ್ತೆ ಆಧಾರಿತ ಚಟುವಟಿಕೆ. ಆರ್ಥಿಕ ವಿದ್ಯಮಾನ, ಏರಿಳಿತಗಳ ಸಮೀಕ್ಷೆಗೆ ದೊಡ್ಡ

### ಕಟಕಟೆಯಲ್ಲಿ ಯಾಂಬು!

ಚಾಟ್ ಜಿಪಿಟಿಯ ಕೆಲಸಗಳ ವಿರುದ್ಧ ಕಾನೂನು ಹೋರಾಟಗಳೂ ಶುರುವಾಗಿವೆ. ಚಿತ್ರಗಳನ್ನು ರಚಿಸುವ 'ಸ್ಟೆಬಿಲಿಟಿ' ಯಾಂತ್ರಿಕ ಬುದ್ಧಿಮತ್ತೆಯು 'ಕಾಮನ್ ಕ್ರಾವ್ಲ್' ಎಂಬ ಅಂತರ್ಜಾಲದಿಂದ ಚಿತ್ರಗಳನ್ನು ಎತ್ತಿಕೊಳ್ಳುತ್ತದೆ ಮತ್ತು ಅವುಗಳನ್ನು ಬಳಸಿಕೊಂಡು ಕೇಳುಗರ ಅವಶ್ಯಕತೆಗನುಗುಣವಾಗಿ ಚಿತ್ರ ತಯಾರಿಸುತ್ತದೆ, ಅದೇನೂ ಸ್ವಂತದ್ದಲ್ಲ ಎಂದು ವಿಶ್ವಖ್ಯಾತಿಯ ಫೋಟೊ ಕಂಪನಿ 'ಗೆಟ್ಟಿ ಇಮೇಜಸ್' ಕಾನೂನು ಹೋರಾಟಕ್ಕಿಳಿದಿದೆ. ಚಾಟ್ ಜಿಪಿಟಿಯ ಅವಾಂತರಗಳು ಒಂದೊಂದಲ್ಲ ಎನ್ನುವ ಗೆಟ್ಟಿ ಕಂಪನಿ, 'ವ್ಯಾಟಿಕನ್‌ನ ಧರ್ಮಗುರು ಪೋಪ್ ಜೀನ್ಸ್ ಜಾಕೆಟ್ ಹಾಕಿಕೊಂಡಿರುವುದನ್ನು ಮತ್ತು ಡೊನಾಲ್ಡ್ ಟ್ರಂಪ್ ದಸ್ತಗಿರಿಯಾಗಿ, ಕೈಕೋಳ ಹಾಕಿಕೊಂಡಿರುವ ಚಿತ್ರಗಳನ್ನು ಇಂಟರ್‌ನೆಟ್‌ನಲ್ಲಿ ನೋಡಬಹುದು! ತನ್ನ ಕಂಪನಿಯ ವಾಟರ್‌ಮಾರ್ಕ್ ಇರುವ ಅನೇಕ ಚಿತ್ರಗಳನ್ನು ಯಾಂತ್ರಿಕ ಬುದ್ಧಿಮತ್ತೆ ಕದ್ದಿದೆ' ಎಂದು ಹೇಳಿದೆ. ಹಕ್ಕುಸ್ವಾಮ್ಯವಿದ್ದರೂ ಚಿತ್ರಗಳನ್ನು ಕದ್ದು, ಮಾರ್ಪಡಿಸಿ, ತನ್ನದೆಂಬಂತೆ ಬಿಂಬಿಸುವ ಯಾಂತ್ರಿಕ ಬುದ್ಧಿಮತ್ತೆಗೆ, ಅಂತರ್ಜಾಲದಲ್ಲಿ ಈಗಾಗಲೇ ದಂಡಿಯಾಗಿ ಶೇಖರಣೆಗೊಂಡಿರುವ ಬರಹಗಳನ್ನು ಕದಿಯುವುದು ಯಾವ ಕಷ್ಟ? ಎಂಬ ಮಾತು ಎಲ್ಲೆಲ್ಲೂ ಜೋರಾಗುತ್ತಿದೆ. ಹಕ್ಕುಸ್ವಾಮ್ಯ ಇರುವ ಸಾಹಿತ್ಯವನ್ನೂ ತನ್ನದೆಂದು ಬಿಂಬಿಸಿಕೊಳ್ಳುವ ಜಾಣ್ಮೆ ಪ್ರಾಪ್ತಿಯಾಗಿರುವಾಗ ಮುಂದಿನ ಅವಘಡಗಳಿಗೆ ನಾವೆಲ್ಲ ತಯಾರಾಗಿರಲೇಬೇಕಾಗುತ್ತದೆ.